ಕಸ್ತೂರ್‌ಬಾ ಏನೂ ಕಡಿಮೆಯಲ್ಲ. ಅಸಲನ್ನು ಬಡ್ಡಿ ಸಮೇತ ತೀರಿಸುವಂತೆ ತಿರುಗುಬಾಣವಾದರು:

'ನೀವ್ ಸ್ವಾತಂತ್ರ್ಯ ಕೊಟ್ರೋ, ನಾನೇ ಸ್ವಾತಂತ್ರ್ಯ ತಗೊಂಡ್ನೋ ಸ್ವಲ್ಪ ಸಾವಧಾನದಿಂದ ಸ್ಮರಿಸ್ಕೊಳ್ಳಿ.'

ಗಾಂಧಿ ಒಳಗೆ ಚುಚ್ಚಿತು. ಗುರುತು ಕಾಣದ ಗಾಯ; ಹೊರಗೆ ಚಿಮ್ಮದ ನೆತ್ತರು ಒಳಗೇ, ಎಲ್ಲಾ ಒಳಗೇ. ನೋವು, ನೆತ್ತರು, ಎಲ್ಲಾ ಒಳಗೇ. ಹೊರಹೊಮ್ಮಿದರೆ ಒಳಗೆಂಬುದು ಗಾಯದ ಗುಹೆಯಾಗುವುದಿಲ್ಲ. ಗಾಂಧಿ, ಒಳಗೆ ಒತ್ತರಿಸುವ ನೆತ್ತರನ್ನು ಹತ್ತಿಕ್ಕುತ್ತ ಮೌನವಾದರು; 'ಗಾಯವೇ ಒಳಗೆ ಮಾಯವಾಗು' ಎನ್ನುತ್ತಾ ಕೂತರು. ಇದು ಕಸ್ತೂರ್‌ಬಾ ಅವರಿಗೂ ಅರ್ಥವಾಯಿತು. ತನ್ನ ಬದುಕಿನಲ್ಲಿ ಕಟ್ಟಿಕೊಂಡ ಕಟುತ್ವದ ಕಟ್ಟಡವನ್ನು ಸ್ವಯಂ ಕೆಡವುದು ಕೆಟ್ಟದ್ದು ಎನ್ನಿಸಿ ತಾವೇ ಸಮಾಧಾನ ಸ್ಥಿತಿಗೆ ಬಂದರು. ಬಾಲ್ಯದ ಮಾತು ತೆಗೆದರು:

'ನಮ್ ಬಾಲ್ಯ ಎಷ್ಟ್ ಚೆಂದ ಇತ್ತು ಅಲ್ವ?'

ಗಾಂಧಿಗೆ ಆಶ್ಚರ್ಯವಾಯಿತು. ಇದ್ದಕ್ಕಿದ್ದಂತೆ ಬಾಲ್ಯಕ್ಕೆ ಹೋದ ವೃದ್ಧಾಪ್ಯದ ಮನಸ್ಸು; ತಕ್ಷಣ ನುಡಿದರು:

'ಹೌದು ಕಸ್ತೂರ್, ಇಳೀ ವಯಸ್ನಲ್ಲಿ ಎಳೀ ವಯಸ್ಸು, ಯಾವಾಗ್ಲೂ ಚೆಂದ ಕಾಣ್ಸುತ್ತೆ.'

'ನಿಮ್ದು ಎಳೀ ವಯಸ್ನಲ್ಲೂ ಇಳೀ ವಯಸ್ಸಿನ ಸ್ವಭಾವಾನೇ.'

ಕಸ್ತೂರ್‌ಬಾ ಇಲ್ಲಿಯೂ ಸ್ವಲ್ಪ ಛೇಡಿಸಿದರು.

'ಅದು ಹೇಗೆ? ಎಳೀ ವಯಸ್ನಲ್ಲಿ ಮುಗ್ಧವಾಗಿರ್ತೀವಿ. ಒಮ್ಮೊಮ್ಮೆ ಮೂರ್ಖರೂ ಆಗಿರ್ತೀವಿ.'

ಕಸ್ತೂರ್‌ಬಾ ನಸು ನಕ್ಕರು. ಮಾತಾಡಲಿಲ್ಲ. ಮಾತಿಗೆ ಮಾತು ಬೆಳೆಯದಿದ್ದರೆ ಗಾಂಧಿಗೆ ಕಸಿವಿಸಿ. ಉಸಿರಿನ ಬಿಸಿ.

'ಯಾಕ್ ಒಳಗೊಳಗೇ ನಗ್ತಿದ್ದೀಯ?' ಎಂದು ಕೇಳಿಯೇಬಿಟ್ಟರು.

'ಮಾತಾಡ್ತ ಮಾತಾಡ್ತ ನಿಮ್ಮ ಕಣ್ಣೀರ್ ಹೋಗಿ ಕಾಂತಿ ಬಂತಲ್ಲ, ಅದಕ್ ನಗು ಬಂತು, ಅದಕ್ಕೂ ಅಪಾರ್ಥ ಮಾಡಿ ಉಪವಾಸ ಸತ್ಯಾಗ್ರಹ ಮಾಡ್‌ಬಿಟ್ಟೀರ!' ಎಂದು ಹೇಳಿದಾಗ ಗಾಂಧಿ ಫಕ್ಕನೆ ನಕ್ಕರು, ಕಸ್ತೂರ್‌ಬಾಗೂ ಸಂತೋಷವಾಯ್ತು.

'ನೀವ್ ಏನೇ ಹೇಳಿ ಬಾಪು. ಸುಮಾರು ಅರವತ್ತು ವರ್ಷ ನಿಮ್ ಜೊತೆ ಸಂಸಾರ ಮಾಡಿದ್ ಮೇಲೂ ನನಗೆ ನನ್ ಬಾಲ್ಯದ ಸುಖಾನೇ ದೊಡ್ಡದು ಅನ್ಸುತ್ತೆ. ಬಾಲ್ಯದಲ್ಲೇ ಹೆಚ್ಚು ಸ್ವತಂತ್ರವಾಗಿದ್ದೆ ಅನ್ಸುತ್ತೆ' ಎಂದರು ಕಸ್ತೂರ್‌ಬಾ.

'ಎಲ್ಲರ ಜೀವನದಲ್ಲೂ ಇದು ಸಹಜ ಕಸ್ತೂರ್. ಬಾಲ್ಯದ ಸುಖ ಮನಸ್ಸಿನ್ ಸುಖ. ಅದಕ್ ಸಾಟಿ ಇಲ್ಲ' ಎನ್ನುತ್ತಾ ಗಾಂಧಿ ಹಾಗೇ ಬಾಲ್ಯಕ್ಕೆ ತೆರಳಿದಂತೆ ಕಂಡರು.

ಕಸ್ತೂರ್‌ಬಾ ಆ ವೇಳೆಗಾಗಲೇ ಪೋರ್‌ಬಂದರ್‌ಗೆ ಹೋಗಿದ್ದರು.

* * *

ಪೋರ್‌ಬಂದರು – ಗುಜರಾತ್‌ನ ಒಂದು ಊರು; ಆ ಊರಿನಲ್ಲಿ ಎರಡು ಕುಟುಂಬಗಳು ಚಿರಪರಿಚಿತ. ಒಂದು–ಕರಮಚಂದ ಗಾಂಧಿ ಕುಟುಂಬ. ಇನ್ನೊಂದು, ಗೋಕುಲದಾಸ್ ಕಪಾಡಿಯಾ ಕುಟುಂಬ. ಕರಮಚಂದ ಗಾಂಧಿ ಮತ್ತು ಪುತಳಿ ಬಾಯಿಯ ಮಗ ಮೋಹನದಾಸ ಕರಮಚಂದ ಗಾಂಧಿ. ಗೋಕುಲದಾಸ್ ಮಖಂಜಿ ಕಪಾಡಿಯಾ ಮತ್ತು ವ್ರಜ್‌ಕುನ್ವಾರ್ ದಂಪತಿಯ ಮಗಳು ಕಸ್ತೂರ್ ಬಾ ಕಪಾಡಿಯ. ಇಬ್ಬರೂ ಹುಟ್ಟಿದ್ದು ಒಂದೇ ವರ್ಷ 1869ರಲ್ಲಿ. ಗಾಂಧಿ ಅಕ್ಟೋಬರ್ 2ರಂದು ಹುಟ್ಟಿದರೆ, ಕಸ್ತೂರ್ ಬಾ, ಗಾಂಧಿಗೂ ಮುಂಚೆ ಏಪ್ರಿಲ್ 11ರಂದು ಹುಟ್ಟಿದ್ದು. ಇಬ್ಬರ ಮನೆತನಕ್ಕೂ ನಿಕಟ ಸಂಬಂಧ. ಹೀಗಾಗಿ ಬಾಲ್ಯದಲ್ಲೇ ಕಸ್ತೂರ್‌ಬಾ ಮತ್ತು ಗಾಂಧಿ ಒಟ್ಟಿಗೇ ಆಟವಾಡುತ್ತ ಬೆಳೆದರು. ಆಗಲೂ ಮುಖಾಮುಖಿ ಇತ್ತು.

ಬಾಲಕ ಗಾಂಧಿ ತನ್ನ ಗೆಳೆಯರೊಂದಿಗೆ ಕಡಲ ತೀರಕ್ಕೋ ಮತ್ತೆಲ್ಲಿಗೋ ಆಟವಾಡಲು ಹೊರಟಾಗ ಬಾಲಕಿ ಕಸ್ತೂರ್‌ಬಾಳನ್ನು ಕರೆಯುತ್ತಿದ್ದ. ಕಸ್ತೂರ್ ಕಪಾಡಿಯಾ, ಕರೆದುಬಿಟ್ಟ ಎಂದು ಕೂಡಲೇ ಒಪ್ಪಿ ಹೊರಡುವ ಹುಡುಗಿ ಅಲ್ಲ.

'ಎಲ್ ಆಟ ಆಡೋದು, ಏನ್ ಆಟ ಆಡೋದು ಅದನ್ ಹೇಳು.'

'ಓ ಮೊದ್ಲೇ ಹೇಳಿ ನಿನ್ ಒಪ್ಗೇ ತಗೋಬೇಕ?'

'ನೀನ್ ಕರೆದ್‌ಬಿಟ್ಟೆ ಅಂತ ತೆಪ್ಪಗ್ ಬಾಯ್ ಮುಚ್ಕಂಡ್ ಬರ್‌ಬೇಕ?'

'ಬಾಯ್ಮುಚ್ಕಂಡ್ ಬರಾಕಾಗ್ದೆ ಇದ್ರೆ ಇಷ್ಟಗಲ ಬಾಯ್ ತೆರ್ಕಂಡ್ ಬಾ.'

ಎಂದು ಗಾಂಧಿ ಛೇಡಿಸಿದ. ಕಸ್ತೂರ್ ಕಪಾಡಿಯಾ ಏನೂ ಕಡಿಮೆ ಅಲ್ಲ. 'ನೀನ್ ಹಿಂಗೆಲ್ಲ ಹೀಯಾಳ್ಸಿದ್ರೆ ನಾನ್ ಸುಮ್ನಿರೋದಿಲ್ಲ. ನಿನ್ ದೊಡ್ಡಸ್ತಿಕೇನೆಲ್ಲ ನನ್ ಹತ್ರ ತೋರುಸ್‌ಬೇಡ' ಎಂದು ವಯ್ಯಾರದಿಂದ ಮೂತಿ ತಿರುವಿ ನುಡಿಯೇಟು ಕೊಟ್ಟಾಗ ಗಾಂಧಿಗೂ ತಾಳ್ಮೆ ತಪ್ಪಿತು. 'ನೀನೇನ್ ತ್ರಿಲೋಕ ಸುಂದ್ರಿ; ಬರ್ದಿದ್ರೇನಂತೆ ಬಿಡು' ಎಂದಾಗ ಕಸ್ತೂರ್, 'ನಿನ್ ಧಿಮಾಕೆಲ್ಲ ನನ್ನ ಹತ್ರ ಬಿಟ್‌ಬಿಡು' ಎಂದು ಮತ್ತೆ ಉತ್ತರಿಸಿಬಿಟ್ಟಳು.

ಜೊತೆಯಲ್ಲಿದ್ದ ಗೆಳೆಯ ಗೆಳತಿಯರಿಗೆ ಪೇಚಾಟ. ಇವರಿಬ್ಬರೂ ಹೀಗೆ ನುಡಿಗೊಂದು ನುಡಿಯೇಟು ಕೊಡುತ್ತಾ ಹೋದರೆ ಆಟ ಹಳ್ಳಕ್ಕೆ ಬೀಳುತ್ತದೆಯೆಂದು ತಿಳಿದು ಹುಡುಗರು ಗಾಂಧಿಯನ್ನೂ ಹುಡುಗಿಯರು ಕಸ್ತೂರ್ ಕಪಾಡಿಯಾನೂ ಸಮಾಧಾನಿಸಿದರು. ಇವರಿಬ್ಬರಿಗೂ ಮನವರಿಕೆಯಾಯಿತು. ಮನೆಯಲ್ಲಿ ಆಟವಾಡಲು ಹೋಗುತ್ತೇವೆಂದು ಹೇಳಿ ಬಂದಿದ್ದರು. ಮೋಹನದಾಸ ಗಾಂಧಿ ಜೊತೆ ಆಟಕ್ಕೆ ಹೋಗ್ತೇನೆ ಎಂದಿದ್ದರಿಂದಲೇ ಕಪಾಡಿಯಾ ಮನೆಯಲ್ಲಿ ಒಪ್ಪಿದ್ದರು. ಆದ್ದರಿಂದ ಕಸ್ತೂರ್ 'ನಡ್ ನಡಿ, ಏನೋ ಹೋಗ್ಲಿ ಅಂತ ಇವತ್ ಆಟಕ್ ಬರ್ತೀನಿ' ಎಂದು ಬಿಗುಮಾನದ ಮಾತನ್ನು ಆಡಿಯೇ ಜೊತೆಗೂಡಿ ಹೊರಟಳು.

ಮೋಹನದಾಸ ಗಾಂಧಿ ಮತ್ತು ಕಸ್ತೂರ್ ಬಳಗ ಊರ ಹೊರಗಿನ 'ಕಡಲ ದೂರಕ್ಕೆ' ಬಂದು ಸೇರಿತು. ಈಗ ಯಾವ ಆಟ ಆಡೋದು ಎಂಬ ಪ್ರಶ್ನೆ ಎದುರಾಯಿತು. ಗಾಂಧಿ 'ನಾನ್ ಹೇಳಿದ್ ಆಟ' ಎಂದರೆ, ಕಸ್ತೂರ್ 'ನಾನ್ ಹೇಳಿದ್ ಆಟ' ಎಂದು ಎದುರುಬದರು ಮಾತಿಗೆ ನಿಂತರು. ಜೊತೆಗೆ ಬಂದವರು 'ನಿಮ್ಮಿಬ್ಬರ ಹಟಾನೇ ಒಂದ್ ಆಟ ಆಗ್ಬಿಟ್ಟಿದೆ. ನೀವೇನ್ ಸುಮ್ನೆ ಒಂದ್ ತೀರ್ಮಾನಕ್ ಬರ್ತೀರೊ, ಇಲ್ಲ ನಾವೇ ಬೇರೆ ಗುಂಪಾಗಿ ಆಟ ಆಡೋದ' ಎಂದು ಎಚ್ಚರಿಸಿದರು. ಆಗ ಗಾಂಧಿ ಸುಮ್ಮನಾದರೆ, ಕಸ್ತೂರ್ 'ಕುಂಟಾಬಿಲ್ಲೆ ಆಟ ಆಡೋಣವ?' ಎಂದು ಕೇಳಿದಳು. ಗಾಂಧಿ ಒಪ್ಪಲಿಲ್ಲ. 'ಅದು ಹೆಂಗಸ್ರ ಆಟ' ಎಂದು ತಾತ್ಸಾರದ ದನಿಯಲ್ಲಿ ಹೇಳಿದಾಗ ಕಸ್ತೂರ್‌ಗೆ ಸಿಟ್ಟು ಬಂತು.

'ಯಾಕೆ ಗಂಡುಸ್ರು ಹೆಂಗಸ್ರಾಟ ಆಟ ಆಡ್‌ಬಾರ್ದ? ಸ್ವಲ್ಪ ಬೆಳೆದ್‌ಕೂಡ್ಲೆ ಹೆಂಗಸರ ಜಡೆ ಹಿಂದ್ ಬೀಳ್ತೀರ! ಆಟದಲ್ಲೂ ಹೆಂಗಸ್ರುದು, ಗಂಡುಸ್ರುದು ಅಂತ ವ್ಯತ್ಯಾಸ ಮಾಡ್ತೀರ. ಇದ್ ಯಾವ್ ನ್ಯಾಯ?'

ಕಸ್ತೂರ್ ಎತ್ತಿದ ಪ್ರಶ್ನೆಗೆ ಎಲ್ಲರೂ ಗಪ್‌ಚುಪ್ಪಾದರು.

ಚಕ್ಕನೆ ರೆಕ್ಕೆ ಬಡಿದ ಹಕ್ಕಿನಹಕ್ಕಿ  
ಕೇಳಿದ ಬಳಗವೆಲ್ಲ ಕಕ್ಕಾಬಿಕ್ಕಿ!  
ಒಡಲ ಕಡಲಲ್ಲಿ ಅಲೆಗಳ ಅಬ್ಬರ  
ಮನದ ಮರಳಲ್ಲಿ ಹೊಸತು ಚಿತ್ತಾರ!

ಚಿತ್ತಾರಗಳು ಕಂಡದ್ದು ಮನದ ಮರಳಲ್ಲಿಯಾದ್ದರಿಂದ ಯಾವ ಅಲೆಬಂದು ಅಳಿಸಿ ಹಾಕುವುದೋ ಹೇಳಲಾಗದು! ಇದೇನು ಕ್ರಮಬದ್ಧವಾಗಿ ಬೆಳೆದ ನ್ಯಾಯದ ಕೂಗಲ್ಲ. ಸಾಂದರ್ಭಿಕ ನುಡಿಸ್ಫೋಟ. ಹಾಗೆ ನೋಡಿದರೆ ತುಂಬಾ ಸಂಪ್ರದಾಯಸ್ಥ ಕೌಟುಂಬಿಕ ಪರಿಸರ ಇಬ್ಬರದೂ. ಈಗ ಸಹಜವಾಗಿಯೇ ಕಸ್ತೂರ್ ನ್ಯಾಯದ ಮಾತು ಆಡಿದ್ದಳು. ಗಾಂಧಿಗೆ ಎದುರಾಡುವ ಮನಸ್ಸಾಗಲಿಲ್ಲ; ಒಂದು ಕ್ಷಣ ಹೌದಲ್ಲವೆ ಎನ್ನಿಸಿತು. ತಾನು ಹಟ ಮಾಡುವುದರಲ್ಲಿ ಅರ್ಥವಿಲ್ಲವೆಂಬ ಆತ್ಮನಿರೀಕ್ಷೆ ಚಿಗುರೊಡೆಯಿತು. ಮನದ ಮರಳಲ್ಲಿ ಮೂಡಿದ ಚಿತ್ತಾರವನ್ನು ಅಳಿಸುವ ಅಲೆಯಾಗಲು ಮನಸ್ಸು ಬರಲಿಲ್ಲ. ಸಮಾಧಾನವಾಗಿ ಹೇಳಿದ:

'ಒಂದು ಕೆಲ್ಸ ಮಾಡೋಣ, ನೀವು ಕುಂಟಾಬಿಲ್ಲೇನೆ ಆಡಿ. ನಾವು ಹುಡುಗ್ರು ನೋಡ್ತೀವಿ. ಚಪ್ಪಾಳೆ ತಟ್ಟಿ ಹುರಿದುಂಬುಸ್ತೀವಿ.'

ಕಸ್ತೂರ್ ಒಪ್ಪಲಿಲ್ಲ. ತಾವು ಆಡೋದು, ಇವರು ನೋಡೋದು – ಯಾಕ್ ಬೇಕು ಇದೆಲ್ಲ ಅನ್ನಿಸಿತು. ಹಾಗೆ ಅನ್ನಿಸಲು ಕಾರಣವಿತ್ತು. ಅದನ್ನೇ ಹೇಳಿದಳು:

'ಅಂದ್ರೆ ನಾವ್ ಆಡ್ಬೇಕು, ನೀವ್ ನೋಡ್‌ಬೇಕು. ನಿಮ್ ಆನಂದಕ್ಕಾಗಿ ನಮ್ ಆಟಾನ, ಅದೆಲ್ಲ ಏನ್ ಬೇಡ, ನೀವೂ ಕುಂಟಾಬಿಲ್ಲೆ ಆಡಿ ನಮ್ ಜೊತೆ.' ಆಗ ಗಾಂಧಿ ಉತ್ತರಿಸುವುದಕ್ಕೆ ಮುಂಚೆಯೇ ಒಬ್ಬ ಹುಡುಗ, 'ಹಾಗಾದ್ರೆ ನಾವ್ ಕಬಡ್ಡಿ ಆಡ್ತೀವಿ. ನೀವೂ ಆಡ್ತೀರ' ಎಂದು ಕೆಣಕಿದ.

ಕಸ್ತೂರ್ ಕಣ್ಣಲ್ಲಿ ದಿಟ್ಟನೋಟ; ಯಾವುದಾದರೇನು ಆಟ ಎಂದು ಹೇಳಿದ್ದು ತಾನೇ ಅಲ್ಲವೇ? ಗಂಡಸರು ಮತ್ತು ಹೆಂಗಸರು ಅಂತ ವಿಂಗಡನೆ ಮಾಡೋದಕ್ಕೆ ಎದುರಾಡಿದವಳು ಈಗ ಸುಮ್ಮನಿದ್ದರೆ ಸರಿಯಾಗದು. 'ಆಯ್ತು,